■ ವಿಶಾಖ ಎನ್.



# ಹೊಸ ಮಿಂಚು ಸಾಯಿ ಅಭಯಂಕರ್

ಸಂಗೀತಕ್ಕೆ ಎಲ್ಲೆ ಇಲ್ಲ. 'ಶಿವ ಅಂತ ಹೋಗುತ್ತಿದ್ದೆ ರೋಡಿನಲಿ...' ಎಂಬ ಜಾಕಿ ಸಿನಿಮಾ ಹಾಡಿನಲ್ಲಿ ನಮ್ಮನ್ನು ಹಿಡಿದಿಟ್ಟದ್ದ ಕಂಠ ಟಿಪ್ಪೂ ಅವರದ್ದು. ಯೋಗರಾಜ್ ಭಟ್ ಸಾಹಿತ್ಯ ಹಾಗೂ ಟಿಪ್ಪೂ ತುಂಟತನ ಬೆರೆತ ಕಂಠದ ಜುಗಲ್ಬಂದಿ ಕ್ಲಿಕ್ ಆದ ಕಾಲಘಟ್ಟವೊಂದು ಕನ್ನಡ ಚಿತ್ರರಂಗದಲ್ಲಿ ಇತ್ತು. ಟಿಪ್ಪೂ ಅವರು ತಮಿಳು ನೆಲದವರು. ಆದರೆ, ಅವರ ಕನ್ನಡ ಉಚ್ಚಾರಣೆ ಮೆಚ್ಚದವರು ವಿರಳ. ಈಗ ಟಿಪ್ಪೂ ಅವರ ಮಗ ಸಾಯಿ ಅಭಯಂಕರ್ ಸುದ್ದಿಯಲ್ಲಿದ್ದಾರೆ. ಇನ್ನೂ ಇಪ್ಪತ್ತು ವಯಸ್ಸಿನ ಈ ಹುಡುಗನ ಎದುರು ಅದಾಗಲೇ ದೊಡ್ಡ ಸಿನಿಮಾಗಳಿಗೆ ಸ್ವರ ಸಂಯೋಜನೆ ಮಾಡುವ ಅವಕಾಶಗಳು ಸಾಲುಗಟ್ಟಿ ನಿಂತಿವೆ. 'ಕಚ್ಚಿ ಸೇರಾ' ಎಂಬ ಸ್ವತಂತ್ರ ಹಾಡಿನ ಮೂಲಕ ಯುವಜನರ ಮನಗೆದ್ದ ಸಂಯೋಜಕ ಹಾಗೂ ಗಾಯಕ ಸಾಯಿ ಅಭಯಂಕರ್ ಆಮೇಲೆ 'ಆಸ ಕೂಡ' ತಮಿಳು ಹಾಡಿನಿಂದ ಕಿಚ್ಚು ಹಚ್ಚಿದರು. ಯೂಟ್ಯೂಬ್ ನಲ್ಲಿ ಈ ಹಾಡನ್ನು 33 ಕೋಟಿ ಜನ. ವೀಕ್ಷಿಸಿದರು. ಸಹೋದರಿ ಸಾಯಿ ಸ್ಮೃತಿ ಜೊತೆ ಸಾಯಿ ಅಭಯಂಕರ್ ಹಾಡಿದ್ದ ಗೀತೆ ಇದು. ಕೇವಲ ಹಾಡಷ್ಟೇ ಅಲ್ಲದೆ ಅದರ ನೃತ್ಯ ಲಾಲಿತ್ಯದಿಂದಲೂ ಇದು ಜನಮನ ಗೆದ್ದಿತ್ತು.

ಈಗ ಈ ಹುಡುಗ ಮಲೆಯಾಳಂ ಹಾಗೂ ತಮಿಳಿನಲ್ಲಿ ಏಕಕಾಲದಲ್ಲಿ ತಯಾರಾಗಿರುವ ಬಲ್ಟಿ ಸಿನಿಮಾಗೆ ಸಂಗೀತ ನೀಡುವ ಮೂಲಕ ಹಿರಿತೆರೆ ಪ್ರವೇಶ ಮಾಡಿದ್ದಾರೆ. ಉನ್ನಿ ಶಿವಲಿಂಗಂ ನಿರ್ದೇಶಿಸಿರುವ ಈ ಸಿನಿಮಾ ಬೋಣಿಯಾದದ್ದೇ ಆದದ್ದು ಸಾಯಿ ಅಭಯಂಕರ್ ಅದೃಷ್ಟ ಖುಲಾಯಿಸಿತು. ಅಟ್ಲಿ ನಿರ್ದೇಶಿಸಿ ಅಲ್ಲು ಅರ್ಜುನ್ ಅಭಿನಯಿಸಲಿರುವ ಸೈ–ಫೈ ಚಿತ್ರ 'ಎಎ22ಎಕ್ಸ್ಎ6'ನ ಹಾಡುಗಳಿಗೆ ಸ್ವರ ಸಂಯೋಜನೆ ಮಾಡುವ ದೊಡ್ಡ ಅವಕಾಶ ಒಲಿದುಬಂದಿದೆ. ಅಷ್ಟೇ ಅಲ್ಲದೆ ಸೂರ್ಯ ನಟಿಸಲಿರುವ ಅವರ 45ನೇ ಸಿನಿಮಾ ಸಂಗೀತ ನಿರ್ದೇಶನದ ಹೊಣೆಯೂ ಈ ಹುಡುಗನಿಗೆ ದೊರೆತಿದೆ.


ಇದಷ್ಟೇ ಅಲ್ಲದೆ ಸಿಂಬು ನಟಿಸಲಿರುವ ಹೊಸ ಚಿತ್ರಕ್ಕೂ ಸಾಯಿ ಅಭಯಂಕರ್ ಮಟ್ಟು ಹಾಕುವುದು ಬಹುತೇಕ ಖಚಿತವಾಗಿದೆ. 'ಲೋಕೇಶ್ ಕನಕರಾಜ್ ಯೂನಿವರ್ಸ್'ನ, ಲಾರೆನ್ಸ್ ರಾಘವ ಅಭಿನಯಿಸಲಿರುವ ಸಿನಿಮಾದ ಹಾಡುಗಳಿಗೂ ಈ ಹುಡುಗನದ್ದೇ ಸಂಗೀತ ಇರಲಿದೆ.

ತಂದೆ ಟಿಪ್ಪು, ತಾಯಿ ಹರಿಣಿ. ಇಬ್ಬರೂ ಚಲನಚಿತ್ರಗಳ ಹಿನ್ನೆಲೆ ಗಾಯನದಲ್ಲಿ ಅನುಭವ ಪಡೆದಿದ್ದವರು. ಸಾಯಿ ಅಭಯಂಕರ್ ಕೂಡ ಬಾಲ್ಯದಲ್ಲೇ ತಬಲಾ, ಮೃದಂಗ ಕಲಿತರು. ಆಮೇಲೆ ಡ್ರಮ್ಸ್, ಗಿಟಾರ್ ತರಹದ ವಾದ್ಯಗಳನ್ನು ನುಡಿಸುವುದರಲ್ಲಿಯೂ ಅನುಭವ ಪಡೆದರು. ಕರ್ನಾಟಕ ಸಂಗೀತದಲ್ಲಿ ಪಳಗಿರುವ ಶ್ರೀರಾಮ್ ಪಾರ್ಥಸಾರಥಿ ಬಳಿ ಹಾಡುಗಾರಿಕೆಯ ಪಾಠ ಕಲಿತರು. ಹದಿಮೂರನೇ ವಯಸ್ಸಿನಲ್ಲೇ ಸ್ವತಂತ್ರ ಸಂಗೀತ ಸಂಯೋಜನೆಯಲ್ಲಿ ಪ್ರಯೋಗಗಳನ್ನು ಮಾಡತೊಡಗಿದ್ದು ವಿಶೇಷ. ಎಲ್ಲ ಮಕ್ಕಳು ಓಯು ಓದಿನ ಗೀಳು ಹತ್ತಿಸಿಕೊಂಡಿದ್ದಾಗ ಈ ಹುಡುಗ ಸಂಗೀತ ಸರಸ್ವತಿ ಹಿಂದೆ ಬಿದ್ದುದು ಅಪರೂಪದ ಪ್ರಸಂಗ. ಅವೆಲ್ಲವೂ ಈಗ ಅವಕಾಶಗಳ ದಿಡ್ಡಿ ಬಾಗಿಲನ್ನು ತೆರೆದಿಟ್ಟಿವೆ. ತಮಿಳು ಸಿನಿಮಾ ಸಂಗೀತದಲ್ಲಿ ಅನಿರುದ್ಧ ರವಿಚಂದರ್ ಉತ್ತರಾಧಿಕಾರಿ ಆಗುವ ಎಲ್ಲ ಲಕ್ಷಣಗಳೂ ಈ ಹುಡುಗನಿಗೆ ಇವೆ ಎಂದೇ ವಿಶ್ಲೇಷಿಸಲಾಗುತ್ತಿದೆ. ■

# ದಕ್ಷಿಣದವರ ಮೇಲೆ ಅನುರಾಗ್ ಪ್ರೀತಿ

ಹೊಸ ನಟ–ನಟಿ ಅಭಿನಯಿಸಿರುವ 'ನಿಶಾಂಚಿ' ಹಿಂದಿ ಸಿನಿಮಾ ಮೂಲಕ ನಿರ್ದೇಶಕ ಅನುರಾಗ್ ಕಶ್ಯಪ್ ತಮ್ಮ ಅದೃಷ್ಟ ಪರೀಕ್ಷೆಗೆ ಮತ್ತೊಮ್ಮೆ ಇಳಿದಿದ್ದಾರೆ. ಅವರೀಗ ಮುಂಬೈನಿಂದ ನೆಲೆಯನ್ನು ಬೆಂಗಳೂರಿಗೆ ಸ್ಥಳಾಂತರಿಸಿದ್ದು, ದಕ್ಷಿಣ ಭಾರತದ ಭಾಷೆಗಳ ಚಿತ್ರಗಳಲ್ಲಿ ನಟಿಸುತ್ತಾ, ಈ ಭಾಷಾ ಸಿನಿಮಾಗಳಲ್ಲೇ ನಿರ್ದೇಶನ ಮಾಡುವ ಆಲೋಚನೆಯನ್ನು ಕೂಡ ವ್ಯಕ್ತಪಡಿಸುತ್ತಾ ಇದ್ದಾರೆ.

ಮಲೆಯಾಳಂ ಚಿತ್ರರಂಗವು ತಾರಾ ನಟರನ್ನು ಬೆಳೆಸಿರುವ ರೀತಿ ಹಾಗೂ ತಾರಾ ವರ್ಚಸ್ಸನ್ನು ಬದಿಗೆ ಇಟ್ಟು, ನಟರು ಅಲ್ಲಿ ವರ್ತಿಸುವ ರೀತಿಯನ್ನು ಅನುರಾಗ್ ಮುಕ್ತ ಕಂಠದಿಂದ ಶ್ಲಾಘಿಸಿದರು. ಮಾದರಿ ಸಿನಿಮಾ ಮಾಡುವುದು ಹೇಗೆ ಎನ್ನುವುದಕ್ಕೆ ಇತ್ತೀಚೆಗೆ ತೆರೆಕಂಡ 'ಲೋಕಾ' ಮಲೆಯಾಳಂ ಚಿತ್ರವನ್ನು ಅವರು ಉದಾಹರಣೆಯಾಗಿ ಕೊಟ್ಟರು. 12 ಕೋಟಿ ರೂಪಾಯಿ ಬಜೆಟ್‌ನಲ್ಲಿ ತಯಾರಾದ ಈ ಚಿತ್ರವು ಗಳಿಕೆಯಲ್ಲಿ ನೂರು ಕೋಟಿ ಕ್ಲಬ್ ಸೇರಲಿದೆ. ಬಾಲಿವುಡ್‌ನಲ್ಲಿ ₹12 ಕೋಟಿ ಹಣವನ್ನು ತಾರೆಯರ ಹೇರ್ ಸ್ಟೈಲಿಸ್ಟ್‌ಗೆ ಖರ್ಚು ಮಾಡುತ್ತಾರೆ ಎಂದು ಅವರು ವ್ಯಂಗ್ಯವಾಗಿ ಹೇಳಿದರು.



ಶಿಸ್ತೇ ಇಲ್ಲದ ಬಾಲಿವುಡ್‌ನ ಧನದಾಹಿ ಮನಸ್ಸುಗಳ ಕುರಿತು ಅವರಲ್ಲಿ ಸಿಟ್ಟು ಮಡುಗಟ್ಟಿದೆ. ಅದಕ್ಕೇ ಐಶ್ವರಿ ಠಾಕ್ರೆ ಎಂಬ ಹೊಸ ಹುಡುಗನನ್ನು ನಿಶಾಂಚಿ ಸಿನಿಮಾದಲ್ಲಿ ಪರಿಚಯಿಸಿದ್ದಾರೆ. ಇದು ತಮ್ಮ ಹೊಸ ಪ್ರಯೋಗದ ಮುನ್ನುಡಿ ಎಂದೂ ನುಡಿದಿರುವ ಅವರು, ದಕ್ಷಿಣ ಭಾರತದ ಸಿನಿಮಾಗಳ ಪ್ರಯೋಗಶೀಲ ಮನಸ್ಸುಗಳನ್ನು ಕೊಂಡಾಡಿದರು. ■